ಶ್ರೀ ಬಿ. ಹುಚ್ಚೇಗೌಡ.—ಮತ್ತು ಆ ಸ್ಥಳಗಳಲ್ಲಿ ಎರಡಾಣೆಯಂತೆ ವಸೂಲು ಮಾಡಬೇಕೇ, ಒಂದಾಣೆಯಂತೆ ವಸೂಲು ಮಾಡಬೇಕೇ ಎಂಬುದಾಗಿ ಜಿಜ್ಞಾಸೆ ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಸ್ಪಷ್ಟವಾಗಿ ತಿಳಿವಳಿಕೆ ಕೊಟ್ಟಿದ್ದೇವೆ. ಸ್ಪೆಷಲ್ ಸೆಸ್ಸ್, ಲೋಕಲ್ ಸೆಸ್ಸ್ ಎರಡೂ merge ಮಾಡಿ ಎರಡಾಣೆ ಪ್ರಕಾರ ವಸೂಲು ಮಾಡಬೇಕು, ಆರು ಕಾಸಿನಂತೆ ವಸೂಲು ಮಾಡುತ್ತಾ ಇದ್ದುದನ್ನು ವಸೂಲು ಮಾಡಕೂಡದು ಎಂಬುದಾಗಿ ಸೂಚನೆ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದ ಆರ್ಡರ್ ಸ್ಪಷ್ಟವಾಗಿರಬಹುದು, ಸರಿಯಾಗಿ ಜಾರಿ ಆಯಿತೇ, ಇಲ್ಲವೇ, ಎಷ್ಟುಮಟ್ಟಿಗೆ ಜಾರಿ ಆಗಿದೆ ಎಂಬುದನ್ನು ನೋಡಿಕೊಳ್ಳಬೇಕು. ಒಂದು ವರ್ಷದಿಂದ ಈ ಪ್ರಶ್ನೆ ಹಾಕುತ್ತಾ ಇದ್ದೇನೆ. ಇದು ಸರಿಯಾದ ರೀತಿಯಲ್ಲಿ ಜಾರಿ ಆಗದೇ ಹೆಚ್ಚಿಗೆ ವಸೂಲಾಗುತ್ತಾ ಇದ್ದ ಪಕ್ಷದಲ್ಲಿ ನೂಕ್ಕ ಕ್ರಮ ತೆಗೆದುಕೊಳ್ಳಬೇಕಾದದ್ದು ಸರ್ಕಾರದವರ ಕರ್ತವ್ಯವಲ್ಲವೇ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಹೆಚ್ಚಿಗೆ ವಸೂಲು ಮಾಡಿದ್ದರೆ, ಹೆಚ್ಚಿಗೆ ವಸೂಲಾದ ಮೊಬಲಗನ್ನು ರೀಫಂಡ್ ಮಾಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದ ಆರ್ಡರ್ ಸರಿಯಾಗಿ ಜಾರಿ ಆಗುತ್ತಾ ಇಲ್ಲ ಎಂದು ಹೇಳುತ್ತೇನೆ. ಕಂದಾಯದ ವಸೂಲಿಯೊಳಗೆ ಇಷ್ಟು ಅನಾದರಣೆ ಆದರೆ ಬಾಕಿ ವಿಷಯಗಳಲ್ಲಿ ಎಷ್ಟುಮಟ್ಟಿಗೆ ಮನ್ನಣೆ ಕೊಡುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಟಿ. ಚನ್ನಯ್ಯ.—ಆರ್ಡರ್ ಜಾರಿಗೆ ಕೊಟ್ಟು ಕ್ರಮ ಬದ್ಧವಾಗಿ ವಸೂಲು ಮಾಡುತ್ತಾ ಇದ್ದಾರೆ.

Amount Collected from Atchkatdars of Hutchavvanahalli Tank, Davangere Taluk.

Q.—263. **Sri G. DUGGAPPA** (Holalkere—Scheduled Castes).—

Will the Government be pleased to state :—

(*a*) whether Rs. 3,100 has been collected from the Atchkatdars of Hutchavvanahalli Tank in Davangere Taluk ;

(*b*) the purpose for which the amount was collected ;

(*c*) whether the amount has been spent for the purpose for which it was collected ?

A.—**Sri Kadidal MANJAPPA** (Minister for Revenue and Public Works).—

(*a*) A sum of Rs. 2,083-11-3 has been collected.

(*b*) For improvements to the channels and repairs to the sluice of Hutchavvanahally Tank.

(*c*) Yes.

Sri G. DUGGAPPA.—I have no supplementaries.

Land grant under Tunga Ane Channel.

Q.—283. **Sri N. HUCHMASTHY GOWDA** (Huliyurdurga).—

Will the Government be pleased to state :—

(*a*) the number of acres of waste land that was in their possession at the time of beginning the Ane work behind Tunga Ane Channel (forest, gomal, amrith mahal kaval or any other kind of waste land) ;

(*b*) of this, the number of acres of land given for cultivation ;

(*c*) out of the lands so given, the number of acres of land obtained by the Government officers either in their name or in the name of their relatives ?

A.—**Sri Kadidal MANJAPPA** (Minister for Revenue and Public Works).—

(*a*)		*A.*	*G.*
Amrith Mahal Kaval or other kind	...	141	15
Forest	...	60	00
Gomal	...	593	10
Total	...	793	25

(*b*) 3 acres 29 guntas.

(*c*) No.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಈ ನಾಲೆಯ ಹಿಂದೆ ಇರತಕ್ಕ ಒಟ್ಟು ಅಚ್ಚುಕಟ್ಟಿನ ವಿಷಯ ಕೇಳಿದ್ದಕ್ಕೆ 793 ಎಕರೆ 25 ಗುಂಟೆ ಎಂದು ಉತ್ತರ ಕೊಟ್ಟಿದ್ದೀರಿ. ಈ ನಾಲೆಯ ಹಿಂದೆ 20 ಸಾವಿರ ಎಕರೆಗೆ ಮೇಲ್ಪಟ್ಟು ಅಚ್ಚುಕಟ್ಟು ಆಗುತ್ತದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಏನು ಪ್ರಶ್ನೆ ಕೇಳಿದ್ದಿರೋ ಅದಕ್ಕೆ ತಕ್ಕ ಉತ್ತರ ಕೊಟ್ಟಿದೆ. ಅಣೆಕೆಲಸ ಪ್ರಾರಂಭ ಮಾಡಿದಾಗ ಅಷ್ಟಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಅಣೆಯಿಂದ ಅಷ್ಟು ಎಕರೆ ಜಮೀನು ಅಚ್ಚುಕಟ್ಟಿಗೆ ಬರುತ್ತದೆ ಎಂಬ ನೀರಿಕ್ಷೆಯ ಮೇರೆ ಸರ್ಕಾರಿ ನೌಕರರನೇಕರು ತಮಗೂ ಜಮೀನು ಸಿಕ್ಕುತ್ತದೆ ಎಂಬ ಉದ್ದೇಶದಿಂದ ಕೆಲಸ ಮಾಡುತ್ತಾ ಇದ್ದಾರೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೋಸ್ಕರ ಈ ಪ್ರಶ್ನೆಯನ್ನು ಕಳುಹಿಸಿದೆ. ಈ ಅಣೆ ಕಟ್ಟುವ ನಂದರ್ಭದಲ್ಲಿ ಈ ಹಿಂದೆ ಸ್ವಲ್ಪ ದಿವಸಕ್ಕೆ ಪೂರ್ವಭಾವಿಯಾಗಿ ಈ ಜಮೀನುಗಳನ್ನು ಎಷ್ಟು ಜನ ತೆಗೆದುಕೊಂಡಿದ್ದಾರೆ ಎಂಬು

ದನ್ನು ಕೇಳುವುದೇ ಈ ಪ್ರಶ್ನೆಯ ಉದ್ದೇಶ. ಇದಕ್ಕೆ ಹೆಚ್ಚು ವಿವರಗಳನ್ನು ತರಿಸಿಕೊಂಡು ಮುಂದೆ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಒಳ್ಳೆಯದು.

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರದಲ್ಲಿ ಬೇಕಾದರೆ ಸರ್ಕಾರದವರು ವಿಚಾರ ಮಾಡುತ್ತಾರೆ. ಇಷ್ಟೇ ವಿವರ ಸಿಕ್ಕುವುದು ಎಂದು ಹೇಳಿ ಇವೊತ್ತು ಬೆಳಿಗ್ಗೆ ರೆವಿನ್ಯೂ ಕಮಿಷನರು ಹೇಳಿದರು. ಇನ್ನು ಹೆಚ್ಚು ವಿವರ ಸಿಕ್ಕುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಣೆಕಟ್ಟಿನ ಮೇಲ್ ಭಾಗದ ಜಮೀನು, ಕೆಳ ಭಾಗದ ಜಮೀನು ಎಂದರೆ ಏನು, ಯಾವ ರೀತಿಯಲ್ಲಿ?

ಶ್ರೀ ಕಡಿದಾಳ್ ಮಂಜಪ್ಪ.—ಅಣೆ ಹತ್ತಿರದಲ್ಲಿ ಎಂದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೆಳ ಭಾಗದ ಜಮೀನು ಎಂದರೆ ಮುಳುಗಡೆಯಾದ ಪ್ರದೇಶ ಎಂದು ಅರ್ಥವಾಗುವುದಿಲ್ಲವೇ.

(*No answer*).

Land Improvement Loans.

Q.—348. **Sri D. R. KARI GOWDA** (Hassan).—

Will the Government be pleased to state :—

(*a*) the Budget allotment for the year 1954-55 for Land Improvement loans and Takavi loans ;

(*b*) out of this allotment, how much amount is spent during this year (districtwar information may be furnished) ?

A.—**Sri Kadidal MANJAPPA** (Minister for Revenue and Public Works).—

(*a*) *L. I. Loan.* Rs. 2,62,500 — *Takavi Loan.* Rs. 5,25,000

(*b*) Amount spent during the year up to the end of January 1955.

	District.		*L. I. Loan.* Rs.	*Takavi Loan.* Rs.
1	Bangalore	...	19,600	25,900
2	Kolar	...	21,500	38'500
3	Tumkur	...	17,850	22,950
4	Mysore	...	23,612	38,850
5	Mandya	...	6,925	29,800
6	Hassan	...	11,275	33,250
7	Shimoga	...	9,750	34,425
8	Chickmagalur	...	6,275	26,250
9	Chitaldrug	...	21,835	41,275
10	Bellary	...	19,500	37,000

ಶ್ರೀ ಡಿ. ಆರ್. ಕರಿಗೌಡ.—ಅಬಾದು ಸಾಲ 2,65,500 ರೂಪಾಯಿಗಳು ಒದಗಿಸಿರುವುದರಲ್ಲಿ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇದಕ್ಕಾಗಿ ಹೆಚ್ಚು ದರಖಾಸ್ತುಗಳಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಎರಡು ತಿಂಗಳು ಇದೆ.

ಶ್ರೀ ಡಿ. ಆರ್. ಕರಿಗೌಡ.—ಆಮೇಲೆ 5,25,000 ರೂಪಾಯಿಗಳು ತಕಾವಿ ಸಾಲಕ್ಕಾಗಿ ಒದಗಿಸುವುದರಲ್ಲಿ ಮೂರು ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿವೆ. ಅಮಲ್ದಾರರೂ ಸಬ್ ಡಿವಿಜ್ಞ ಆಫೀಸರೂ ಸಾಲ ಮಂಜೂರುಮಾಡಿದರೆ ಅದು ವಸೂಲಾಗುವಾಗ ಸರಿಯಾಗಿ ವಸೂಲಾಗದಿದ್ದರೆ ತಮ್ಮ ಪರ್ಷನಲ್ಲಿ ಅಥವಾ ಸಂಬಳದಲ್ಲಿ ಹಿಡಿಯುತ್ತಾರೆ ಎಂದು ಹೇಳಿ ಅವರು ಹಣ ವಿಲೇವಾರಿ ಮಾಡುತ್ತಿಲ್ಲ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್‌ಗನುಸಾರವಾಗಿ ಅವರು ಸಾಲದ ಪೊಬಲಗನ್ನು ವಿಲೇವಾರಿ ಮಾಡುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಸಾಲ ತೆಗೆದು ಕೊಂಡವರು ವಾಪಸು ಕೊಡದಿದ್ದರೆ, ಆ ಹಣವನ್ನು ಯಾವ ಅಧಿಕಾರಿಗಳು ಮಂಜೂರು ಮಾಡುತ್ತಾರೋ ಅವರ ಸಂಬಳದಲ್ಲಿ ಅಥವಾ ಅವರು ರಿಟೈರ್ ಆಗಿದ್ದರೆ ಅವರ ಪರ್ಷನಲ್ಲಿ ಹಿಡಿದು ವಸೂಲುಮಾಡಬೇಕೆಂದು ಸರ್ಕಾರಿ ಆರ್ಡರ್ ಇಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಆ ರೀತಿ ರೂಲ್ಸು ಬಹಳ ಕಾಲದಿಂದ ಇದೆ. ಹಿಂದೆ ಆ ರೀತಿ ಸಾಲ ಕೊಡುವಾಗ ತಮಗೆ ಬೇಕಾದವರಿಗೆ ಕೊಟ್ಟುಕೊಳ್ಳುತ್ತಾರೆ, ಅದು ವಸೂಲಾಗುವುದಿಲ್ಲ ಎಂದು ಅಪಾದನೆ ಬಂದಮೇಲೆ, ಸಾಲ ವಾಪಸು ಬರುವಂತೆ ಮಾಡುವುದ ಕ್ಕೋಸ್ಕರ ಸಾಲ ಮಂಜೂರು ಮಾಡತಕ್ಕ ಅಧಿಕಾರಿಗಳ ಸ್ವಂತ ಜವಾಬ್ದಾರಿ ಇರಬೇಕು ಎಂದು ರೂಲ್ಸ್ ಮಾಡಿದರು. ಈಗಲೂ ಆ ರೂಲ್ಸ್‌ಗನುಸಾರವಾಗಿ ಕೆಲಸ ನಡೆಯುತ್ತಾ ಇದೆ.

ಶ್ರೀ ಡಿ. ಆರ್. ಕರಿಗೌಡ.—ಈ ರೂಲ್ಸನ್ನು ಬದಲಾವಣೆ ಮಾಡತಕ್ಕ ಕಾಲ ಈಗ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಬದಲಾವಣೆ ಮಾಡ ಬೇಕೇ ಎಂಬುದನ್ನು ಯೋಚನೆ ಮಾಡಬೇಕು. ಈ ರೀತಿ ನಿರ್ಬಂಧ ಇಲ್ಲದೇ ಇದ್ದರೆ ಸಾಲ ಏನೂ ವಸೂಲಾಗುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಪರ್ಷನ್ ಆದಮೇಲೂ ಅವರು ಆ ತಪ್ಪಿಗೆ ಗುರಿಯಾಗಬೇಕೇ?

ಶ್ರೀ ಕೆ. ಹನುಮಂತಯ್ಯ.—ಯೋಚನೆ ಮಾಡೋಣ.

ಶ್ರೀ ಡಿ. ಆರ್. ಕರಿಗೌಡ.—ಎಲ್ಲಾ ಡಿಸ್ಟ್ರಿಕ್ಟ್ ಗಳಲ್ಲೂ ಸೆಂಟ್ರಲ್‌ಬ್ಯಾಂಕುಗಳನ್ನು ಪ್ರಾರಂಭಮಾಡು ವುದರಿಂದ ಈ ಸಾಲಗಳನ್ನು ಆಯಾ ಸಹಕಾರ ಸಂಘಗಳ ಮೂಲಕ ಕೊಡುವುದು ನೂಕ್ತವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡು ತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಇದನ್ನು ಕಳೆದ 2-3 ವರ್ಷಗಳಿಂದಲೂ ಹೇಳುತ್ತಾ ಇಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿಲ್ಲ.